ಒಬ್ಬ ಮಹಿಳೆ ತನ್ನ ಜೊತೆಗೆ ಗಂಡ ಅಥವಾ ವಿವಾಹ ನಿಷಿದ್ಧ ಪುರುಷರು ಇಲ್ಲದೆ ಎರಡು ದಿನಗಳಷ್ಟು ದೂರದ ಪ್ರಯಾಣ ಮಾಡಬಾರದು

ಅಬೂ ಸಈದ್ ಖುದ್ರಿ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಪ್ರವಾದಿಯವರೊಂದಿಗೆ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹನ್ನೆರಡು ಯುದ್ಧಗಳಲ್ಲಿ ಪಾಲ್ಗೊಂಡಿದ್ದರು. ಅವರು ಹೇಳಿದರು: ನಾನು ಪ್ರವಾದಿಯವರಿಂದ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನನ್ನನ್ನು ಅತಿಯಾಗಿ ಆಕರ್ಷಿಸಿದ ನಾಲ್ಕು ವಿಷಯಗಳನ್ನು ಕೇಳಿದ್ದೇನೆ. ಅವರು ಹೇಳಿದರು: "ಒಬ್ಬ ಮಹಿಳೆ ತನ್ನ ಜೊತೆಗೆ ಗಂಡ ಅಥವಾ ವಿವಾಹ ನಿಷಿದ್ಧ ಪುರುಷರು ಇಲ್ಲದೆ ಎರಡು ದಿನಗಳಷ್ಟು ದೂರದ ಪ್ರಯಾಣ ಮಾಡಬಾರದು. ಎರಡು ದಿನಗಳಲ್ಲಿ—ಈದುಲ್-
ಫಿತ್ರ್ ಮತ್ತು ಈದುಲ್-ಅದ್ಹಾ—ಉಪವಾಸ ಆಚರಿಸಬಾರದು. ಫಜ್ರ್ ನಮಾಝಿನ ನಂತರ ಸೂರ್ಯೋದಯದವರೆಗೆ ಮತ್ತು ಅಸರ್ ನಮಾಝಿನ ನಂತರ ಸೂರ್ಯಾಸ್ತದವರೆಗೆ ಬೇರೆ ನಮಾಝ್ ಮಾಡಬಾರದು. ಮೂರು ಮಸೀದಿಗಳನ್ನು ಹೊರತುಪಡಿಸಿ ಬೇರೆಲ್ಲಿಗೂ ಯಾತ್ರೆ ಹೋಗಬಾರದು — ಮಸ್ಜಿದುಲ್-ಹರಾಂ, ಮಸ್ಜಿದುಲ್-ಅಕ್ಸಾ
ಮತ್ತು ನನ್ನ ಈ ಮಸೀದಿ (ಮಸ್ಜಿದು-ನ್ನಬವಿ)." [صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಾಲ್ಕು ವಿಷಯಗಳನ್ನು ನಿಷೇಧಿಸಿದ್ದಾರೆ: ಮೊದಲನೆಯದು: ಗಂಡ ಅಥವಾ ವಿವಾಹ ನಿಷಿದ್ಧ ಪುರುಷರು ಇಲ್ಲದೆ ಮಹಿಳೆ ಎರಡು ದಿನಗಳಷ್ಟು ದೂರದ ಪ್ರಯಾಣ ಮಾಡುವುದನ್ನು ನಿಷೇಧಿಸಲಾಗಿದೆ. ವಿವಾಹ ನಿಷಿದ್ಧ ಪುರುಷರು ಎಂದರೆ ಮಗ, ತಂದೆ, ಸೋದರ ಪುತ್ರ, ಸೋದರಿ ಪುತ್ರ ಚಿಕ್ಕಪ್ಪ-ದೊಡ್ಡಪ್ಪ, ಸೋದರ ಮಾವ ಮುಂತಾದ ಶಾಶ್ವತವಾಗಿ ವಿವಾಹ ನಿಷಿದ್ಧರಾದ ರಕ್ತ ಸಂಬಂಧಿಗಳು. ಎರಡನೆಯದು: ಈದುಲ್-ಫಿತ್ರ್ (ರಂಝಾನ್) ಹಬ್ಬದ ದಿನ ಮತ್ತು ಈದುಲ್-ಅದ್ಹಾ (ಬಕ್ರೀದ್) ಹಬ್ಬದ ದಿನ ಉಪವಾಸ ಆಚರಿಸುವುದನ್ನು ನಿಷೇಧಿಸಲಾಗಿದೆ. ಅದು ಹರಕೆಯ ಉಪವಾಸ, ಐಚ್ಛಿಕ ಉಪವಾಸ ಅಥವಾ ಪ್ರಾಯಶ್ಚಿತ್ತದ ಉಪವಾಸ ಯಾವುದೇ ಆಗಿದ್ದರೂ ಅದರಲ್ಲಿ ವ್ಯತ್ಯಾಸವಿಲ್ಲ. ಮೂರನೆಯದು: ಅಸರ್ ನಮಾಝಿನ ಬಳಿಕ ಸೂರ್ಯಾಸ್ತದ ತನಕ ಮತ್ತು ಮುಂಜಾನೆಯ ಉದಯದ ಬಳಿಕ ಸೂರ್ಯೋದಯದ ತನಕ ಐಚ್ಛಿಕ ನಮಾಝ್ ನಿರ್ವಹಿಸುವುದನ್ನು ನಿಷೇಧಿಸಲಾಗಿದೆ. ನಾಲ್ಕನೆಯದು: ಮೂರು ಮಸೀದಿಗಳ ಹೊರತು ಬೇರೆ ಯಾವುದಾದರೂ ಸ್ಥಳಕ್ಕೆ, ಅದಕ್ಕೆ ಶ್ರೇಷ್ಠತೆಯಿದೆ ಮತ್ತು ಅಲ್ಲಿ ನಿರ್ವಹಿಸುವ ಆರಾಧನೆಗಳಿಗೆ ಹಲವಾರು ಪಟ್ಟು ಪ್ರತಿಫಲವಿದೆ ಎಂಬ ನಂಬಿಕೆಯಿಂದ ಪ್ರಯಾಣ ಮಾಡುವುದು. ಈ ಮೂರು ಮಸೀದಿಗಳ ಹೊರತು ಇತರ ಮಸೀದಿಗಳಿಗೆ ನಮಾಝ್ ಮಾಡುವ ಉದ್ದೇಶದಿಂದ ಯಾತ್ರೆ ಹೊರಡಬಾರದು. ಮಸ್ಜಿದುಲ್ ಹರಾಂ, ಮಸ್ಜಿದು-ನ್ನಬವಿ ಮತ್ತು ಮಸ್ಜಿದುಲ್-ಅಕ್ಸಾ ಈ ಮೂರು ಮಸೀದಿಗಳ ಹೊರತು ಬೇರೆ ಮಸೀದಿಗಳಲ್ಲಿ ಪ್ರತಿಫಲವು ಇಮ್ಮಡಿಯಾಗುವುದಿಲ್ಲ.

http://sunnah.global/hadeeth/kn/show/10603